ಶ್ರೀ ಜಿ.ಪಿಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ಹೌದು ರೈಲು ರಸ್ತೆಯನ್ನು ವಿಸ್ತಾರ ಮಾಡಲು ಸರ್ಕಾರ ಆಲೋಚಿಸಿದೆ.

ಆ) ಹೌದು.

ಇ) ಸಲ್ಲಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ತಯಾರಾದ ಕನ್ನಡ ಚಲನಚಿತ್ರಗಳ ಸಂಖ್ಯೆ

1141 (1948) ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರತಿ ವರ್ಷ ರಾಜ್ಯದಲ್ಲಿ ತಯಾರಾಗುವ ಕನ್ನಡ ಚಲನಚಿತ್ರಗಳ ಸಂಖ್ಯೆ ಎಷ್ಟು?
2. ರಾಜ್ಯದ ಹೊರಗಡೆ ತಯಾರಾದ ಚಿತ್ರಗಳ ಸಂಖ್ಯೆ ಎಷ್ಟು?
3. ಕನ್ನಡ ಚಿತ್ರಗಳನ್ನು ತಯಾರಿಸಿದ ಮತ್ತು ತಾಂತ್ರಿಕ ನೆರವು ನೀಡಿದ ಹೊರ ರಾಜ್ಯಗಳಾವುವು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

1. ಪ್ರತಿ ವರ್ಷ ಸರಾಸರಿ 75 ರಿಂದ 80 ಕನ್ನಡ ಚಲನಚಿತ್ರಗಳು ರಾಜ್ಯದಲ್ಲಿ ತಯ್ಯಾರಾಗುತ್ತಿವೆ.
2. ಕನ್ನಡ ಚಲನಚಿತ್ರಗಳಾವುವು. ರಾಜ್ಯದ ಹೊರಗಡೆ ತಯಾರಾಗುತ್ತಿಲ್ಲ.
3. ಹೊರ ರಾಜ್ಯಗಳಾವುವು. ಕನ್ನಡ ಚಿತ್ರಗಳನ್ನು ತಯಾರಿಸಿರುವುದಿಲ್ಲ ಮತ್ತು ತಾಂತ್ರಿಕ ನೆರವು ನೀಡಿರುವುದಿಲ್ಲ.

ಜಿಲ್ಲಾ ಪರಿಷತ್ತು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವುದು.

1142 (1951) ಶ್ರೀ ಮನೋಹರ್ ಐನಾಪುರ (ಬಳ್ಳಿಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ತು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವುದಕ್ಕೆ ಸರ್ಕಾರದ ಬಳಿ ಯಾವುದಾದರೂ ಯೋಜನೆ ಇದೆಯೇ?

ಆ) ಹಾಗಿದ್ದಲ್ಲಿ. ಜಿಲ್ಲಾಪರಿಷತ್ತಿನ ರಸ್ತೆಗಳ ಸಂಖ್ಯೆ ಎಷ್ಟು?

ಇ) ಇದರಲ್ಲಿ ಬಳ್ಳಿಳ್ಳಿ ವಿಧಾನಸಭಾ ಮತ ಕ್ಷೇತ್ರದಲ್ಲಿ ಎಷ್ಟು ರಸ್ತೆಗಳು ಇವೆ?

ಶ್ರೀ ಜಿ.ಪಿಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ 10000 ಕಿ.ಮಿ. ರಸ್ತೆಗಳನ್ನು ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 50 ಕಿ.ಮೀ. ನ ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ

ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರದ ಆದೇಶವನ್ನು ದಿನಾಂಕ 18-2-1992 ರಂದು ಹೊರಡಿಸಲಾಗಿದೆ.

ಆ) ಉತ್ತರ ಮೇಲಿನಂತೆ.

ಇ) ಬಳ್ಳಾಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರವನ್ನು ಸಧ್ಯದಲ್ಲಿ ತೀರ್ಮಾನಿಸಲಾಗುವುದು.

ಉಪಾಧ್ಯಕ್ಷರು : ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಉಪಾಧ್ಯಕ್ಷಿಣಿಯವರು : ಈಗ ಮಾನ್ಯ ಸದಸ್ಯರು ಒಂದು ಕಾಗದವನ್ನು ಕಳುಹಿಸಿದ್ದಾರೆ. ಅದು ಏನೆಂದು ಕೇಳೋಣ.

ಮಾನ್ಯ ಉಪಾಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ನಾಗರಹೊಳೆ ಅಭಯಾರಣ್ಯಕ್ಕೆ ಬೆಂಕಿ

† ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತು ಬೆಳಿಗ್ಗೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ನಾಗರಹೊಳೆ ಅಭಯಾರಣ್ಯ ಹತ್ತಿಕೊಂಡು ಸಂಪೂರ್ಣವಾಗಿ ನಾಶವಾಗತಕ್ಕಂಥ ಮಟ್ಟಕ್ಕೆ ಬಂದಿದೆ ಎಂದು ಸುದ್ದಿ ಬಂದಿದೆ. ಅಲ್ಲಿ ಕಳೆದ 3-4 ದಿವಸಗಳಲ್ಲಿ ಅಭಯಾರಣ್ಯ ಹತ್ತಿಕೊಳ್ಳುವುದಕ್ಕೆ ಮುಂಚೆ ಎಲ್ಲ ಪೋಲೀಸ್ ಅಧಿಕಾರಿಗಳು ಇದ್ದರೂ ಸಹಿತ ಏನು ಪ್ರಯೋಜನವಾಗಿಲ್ಲ. ಅವರು ಸಂಧಾನ ಮಾಡತಕ್ಕಂಥದ್ದರಲ್ಲಿ ವಿಫಲರಾಗಿ, ಆಮೇಲೆ ಯಾರೋ ಒಬ್ಬ ಚಿನ್ನಪ್ಪ ಎಂಬುವರು ಸತ್ತು ಹೋದ ಹಿನ್ನೆಲೆಯಲ್ಲಿ ಈ ಗಲಾಟೆ ಪ್ರಾರಂಭವಾಗಿದೆ. ಇವತ್ತು ಇಡಿ ರಾಷ್ಟ್ರದಲ್ಲಿ ಬಹಳ ಪ್ರಮುಖ್ಯವಾಗಿರತಕ್ಕಂಥ ಒಂದು ಅಭಯಾರಣ್ಯಕ್ಕೆ ಬೆಂಕಿ ಬಿದ್ದಿರತಕ್ಕಂಥ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಅಧಿಕಾರಿ ಏತಕ್ಕೆ ಇಷ್ಟೊಂದು ನಿರ್ಲಕ್ಷತೆಯನ್ನು ತೋರಿಸಿದ್ದಾರೆ? ಏತಕ್ಕೆ ಇಡೀ ಅಭಯಾರಣ್ಯ ನಾಶವಾಗಿ ಹೋಗಿದೆ? ಈ ಒಂದು ಪತ್ರಿಕೆಯಲ್ಲಿ ಬಂದಿರುವ ವಿಷಯದ ಬಗ್ಗೆ ಸರ್ಕಾರ ಏನು ತೀರ್ಮಾನ ಮಾಡಿದೆ? ಏನು ಕ್ರಮ ತೆಗೆದುಕೊಂಡಿದೆ? ಇದು ಹೇಗೆ ಪ್ರಾರಂಭವಾಯಿತು? ಅಲ್ಲಿಯ ಜನರು ಯಾಚ್ಚೆದ್ದು ಬೆಂಕಿ ಹಚ್ಚಿದ ಸಂದರ್ಭದಲ್ಲಿ ಅದನ್ನು ಹತೋಟಿಗೆ ತೆಗೆದುಕೊಳ್ಳದಿರತಕ್ಕಂಥ ಮಟ್ಟಕ್ಕೆ ಅಧಿಕಾರಿಗಳು ಹೋಗಿರಬೇಕಾದರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದೆ? ಸರ್ಕಾರ ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

† ಶ್ರೀ ರಾಮಲಿಂಗ ರೆಡ್ಡಿ : ಇವತ್ತಿನ ದಿವಸ ನಾಗರಹೊಳೆಯಲ್ಲಿ ಬೆಂಕಿಬಿದ್ದು ಸಾವಿರಾರು ಎಕರೆ ಅರಣ್ಯ ಸುಟ್ಟು ಹೋಗಿರುವುದರ ಜೊತೆಗೆ ಅಲ್ಲಿರತಕ್ಕ ಸಹಸ್ರಾರು ಪ್ರಾಣಿಗಳು ಬೆಂದುಹೋಗಿವೆ ಎಂದು ಪತ್ರಿಕೆಗಳಲ್ಲಿ ನೋಡಿ ತಿಳಿದುಕೊಳ್ಳುತ್ತಿದ್ದೇವೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕೆಂದು ಈ ಸಭೆಯ ಮೂಲಕ ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ನ್ಯಾಯಾಂಗ ತನಿಖೆಗಿಂತ ಮುಖ್ಯವಾಗಿ ಮಾನ್ಯ ಅರಣ್ಯ ಮಂತ್ರಿಗಳು ಸ್ಪಾಟ್‌ಗೆ ಹೋಗಿ ಏನಾಗಿದೆ ಎಂದು ನೋಡಿ ಮುಂದೆ ಬೆಂಕಿ ಹರಡದಂತೆ ಎಚ್ಚರಿಕೆ ವಹಿಸಿದರೆ